ನಮ್ಮ ಜೀವನದಲ್ಲಿ ನೆರೆಹೊರೆಯ ಪಾತ್ರ ಅತಿ ಮುಖ್ಯ. ನಮ್ಮ ಕಷ್ಟ ಸುಖಕ್ಕೆ ಆಗುವವರು ನೆರೆಹೊರೆ. ಒಮ್ಮೊಮ್ಮೆ ಒಬ್ಬರ ಮೇಲೊಬ್ಬರು ಕಳಂಕ ಹೊರಿಸಿ, ಅವರನ್ನ ಹಳ್ಳಕ್ಕೆ ತಳ್ಳಿ ಆಳಿಗೊಬ್ಬ ಕಲ್ಲು ಹಾಕುವವರೂ......ಈ ನೆರೆಹೊರೆ. ಒಟ್ಟಿನಲ್ಲಿ ಹೇಳಬೇಕೆಂದರೆ, ನಮ್ಮೆಲ್ಲರ ಜೀವನದಲ್ಲಿ ಈ ನೆರೆಹೊರೆಯ ಪಾತ್ರ ದೊಡ್ಡದು. ಹಾಗೇ, ನಮ್ಮ ಸ್ವಭಾವವರಿತು ಹೊಂದಿಕೊಳ್ಳುವವರು ನೆರೆಹೊರೆ. ಎಷ್ಟೋ ಜನ ಈ ನೆರೆ ಹೊರೆಯ ಕಾರಣದಿಂದ ಪ್ರಾಣ ಕಳೆದು ಕೊಂಡವರು ಒಂದು ಕಡೆ ಆದರೆ, ಪ್ರಾಣ ಉಳಿಸಿಕೊಂಡವರೂ ಇದ್ದಾರೆ.

ರಾಮಭಟ್ಟರು ಅವರ ಹೆಂಡತಿ ಸಾವಿತ್ರಮ್ಮ ಬ್ರಾಹ್ಮಣರು. ರಾಮಭಟ್ಟರು ವೇದಶಾಸ್ತ್ರ ಬಲ್ಲವರು. ಕನ್ನಡ ಅಧ್ಯಾಪಕರಾಗಿ (ಪ್ರೌಢ ಶಾಲೆಯಲ್ಲಿ) ನಿವೃತ್ತರಾಗಿ, ನಂತರ ಪೌರೋಹಿತ್ಯ ವೃತ್ತಿಗೆ ಇಳಿದವರು. ಹೆಂಡತಿ ಸಾವಿತ್ರಮ್ಮ ಪತಿಗೆ ತಕ್ಕ ಪತ್ನಿ. ದೇವರ ಪೂಜೆ, ಆಚಾರ ವಿಚಾರ ತಿಳಿದುಕೊಂಡವರು. ಮಡಿಮೈಲಿಗೆ ಆಚರಿಸುವವರು. ಪತಿಯೇ ದೇವರು ಎಂದು ನಂಬಿರುವವರು. ಇವರ ಮಗಳು ಮಂದಾಕಿನಿ. ಮಗಳನ್ನು ಸ್ವಲ್ಪ ಮಟ್ಟಿಗೆ ಓದಿಸಿ, ಅವಳು ಮದುವೆ ವಯಸ್ಸಿಗೆ ಬಂದ ಮೇಲೆ, ನಿವೃತ್ತರಾಗಿ ಬಂದ ಹಣದಿಂದ ದೂರದ ಸಂಬಂಧದ ಹುಡುಗನಿಗೆ ಕೊಟ್ಟು ಮದುವೆ ಮಾಡಿದರು. ಆ ಹುಡುಗ ಬೆಂಗಳೂರಿನಲ್ಲಿ ಒಳ್ಳೆಯ ಕೆಲಸದಲ್ಲಿದ್ದವನು. ಅಮೆರಿಕಗೆ ಹೋಗುವ ಅವಕಾಶ ಸಿಕ್ಕಿದ್ದರಿಂದ, ಹೆಂಡತಿ ಮಂದಾಕಿನಿಯನ್ನೂ ಕರ್ಕೊಂಡು ಅಮೆರಿಕಗೆ ಹೋಗಿ ಅಲ್ಲಿಯೇ ಉಳಿದರು. ಇಲ್ಲಿ ರಾಮಭಟ್ಟರು, ಸಾವಿತ್ರಮ್ಮ ತಾವೇ ಕಟ್ಟಿಸಿದ ಮನೆಯಲ್ಲಿ, ಐಶಾರಾಮ ಜೀವನಕ್ಕೆ ಆಸೆಪಡದೇ, ಸರಳವಾಗಿ ಜೀವನ ನಡೆಸುತ್ತಿದ್ದರು. ಅವರ ಜೀವನಕ್ಕೆ ಪೆನ್ಶನ್ ಸಾಕಾಗುತ್ತಿತ್ತು. ವರ್ಷಕೊಮ್ಮೆ ಬರುವ ಮಗಳು ಅಳಿಯನಿಗಾಗಿ ಕಾಯುವುದು ಅವರಿಗೆ ಸಂತಸ ತರುವ ವಿಷಯವಾಗಿತ್ತು. ಹೇಳಿಕೊಳ್ಳದ ನೆಂಟರಿಲ್ಲದ ಅವರಿಗೆ ಇದ್ದ ಮನೆಯೇ ದೇಗುಲ, ಅಕ್ಕಪಕ್ಕದವರು, ಅಂದರೆ ನೆರೆಹೊರೆಯೇ ನೆಂಟರು ಇಷ್ಟರು ಆಗಿದ್ದರು. ಆ ಬಡಾವಣೆಯ ಜನರು ಕೂಡಾ ರಾಮಭಟ್ಟರು ಅಂದರೆ, ಹೆಚ್ಚಿನ ಮರ್ಯಾದೆ ಕೊಡುತ್ತಿದ್ದರು.

ಒಮ್ಮೆ ರಾಮಭಟ್ಟರ ಬಲಭಾಗದ ಮನೆಯವರು, ಅವರಿದ್ದ ಮನೆಯ ಮೇಲೆ ಎಲ್ಲಾ ಅಗೆತ ಮಾಡಿ, ಆಧಾರ ಸ್ತಂಭ ಹಾಕಿ ದೊಡ್ಡದಾಗಿ ಮನೆ ಕಟ್ಟಲು ಶುರು ಮಾಡಿದರು. ರಾಮಭಟ್ಟರ ಕಾಂಪೌಂಡ್ ಗೋಡೆಗೆ ಅಂಟಿ ಕೊಂಡು ಆಧಾರ ಸ್ತಂಭ ಹಾಕಿದರೂ ರಾಮಭಟ್ಟರಾಗಲಿ ಸಾವಿತ್ರಮ್ಮನವ ರಾಗಲಿ ಯಾವುದಕ್ಕೂ ಚಕಾರವೆತ್ತಲಿಲ್ಲ. ಅವರ ಜಾಗದಲ್ಲಿ ಅವರು ಕಟ್ಟಿಸಿ ಕೊಳ್ಳುತ್ತಿದ್ದಾರೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಇದನ್ನು ನೋಡಿದ ಎದುರು ಮನೆ ಸುಬ್ರಮಣಿ ಮತ್ತು ಅವರ ಹೆಂಡತಿ ಚೂಡಾಮಣಿ ಇಬ್ಬರೂ ರಾಮಭಟ್ರ ಮನೆಗೆ ಬಂದು 'ಅಲ್ಲಾ ಭಟ್ಟರೇ, ನಿಮ್ಮ ಪಕ್ಕದ ಮನೆಯವರು ಪೂರ್ತಿ ಜಾಗ ತಗೊಂಡು ನಿಮ್ಮನೆ ಕಡೆಗೇ ಕಿಟಕಿ ಇಡ್ತಾ ಇದಾರೆ ಇದನ್ನು ನೋಡಿಯೂ ಸುಮ್ಮನಿದಿರಲ್ಲಾ..?' ಎಂದರು.

'ಅಲ್ಲಾ, ಸುಬ್ರಮಣಿಯವರೇ, ಅವರ ಜಾಗ ದುಡ್ಡಿದೆ, ಕಟ್ಟಿಸಿ ಕೊಳ್ತಾರೆ ಬಿಡಿ'

'ಕಟ್ಟಿಸಿ ಕೊಳ್ಳಲಿ ಭಟ್ರೇ. ಆದ್ರೆ ನಿಮಗೆ ನಿಮಗೆ ಅನ್ಯಾಯವಾಗ್ತಿದೆಯಲ್ಲಾಂತ ನಾವು ಹೇಳ್ತಿರೋದು!'

ಆ ಮಾತು ಕೇಳಿ ರಾಮಭಟ್ರು ಚಕಿತಗೊಂಡು, 'ಏನು! ನನಗೆ ಅನ್ಯಾಯನಾ? ಹೇಗೆ?' ಎಂದಾಗ, ಸುಬ್ರಮಣಿಯವರು, 'ಅಲ್ಲಾ ಭಟ್ರೇ ಈಗ ನೋಡಿ, ನೀವು ಮೂರಡಿ ಜಾಗಕ್ಕಿಂತಲೂ ಜಾಸ್ತಿ ಜಾಗ ಬಿಟ್ಟಿದಿರಾ ತಾನೇ, ಅವರು ನಿಮ್ಮನೆ ಕಡೆ ಒಂದಡಿ ಜಾಗ ಬಿಡದೇ ಗೋಡೆ ತಗೊಂಡಿದಾರೆ ಸರಿ. ಆದರೆ ನಿಮ್ಮನೆ ಕಡೆ ಕಿಟಕಿ ಇಡ್ತಾ ಇದಾರೆ ಇದು ತಪ್ಪು. ಪೂರ್ತಿಯಾಗಿ ಗೋಡೆ ತಗೊಳ್ಳೋದು ತಪ್ಪು, ಅಕಸ್ಮಾತ್ ಗೋಡೆ ತಗೊಂಡ್ರೂ ಕಿಟಕಿ ಇಡುವ ಹಾಗಿಲ್ಲ. ನೀವು ಸುಮ್ಮನಿದ್ದರೆ, ಅವರ ಕಿಟಕಿ ಅಲ್ಲೇ ಇರುತ್ತೆ, ನಿಮ್ಮ ಜಾಗ ಹೋಗುತ್ತೆ ಅಷ್ಟೇ'

'ಅದು ಹೇಗೆ ಹೋಗುತ್ತೆ ಸ್ವಾಮಿ! ನಮ್ಮ ಜಾಗ ಇರೋ ಅಷ್ಟಿದೆಯಲ್ಲಾ! ಇದಕ್ಕೆ ನನ್ನ ಹತ್ರ ದಾಖಲೆನೂ ಇದೆ. ಹೇಗೆ ಜಾಗ ಹೋಗುತ್ತೆ?' ಅರ್ಥವಾಗದೇ ಕೇಳಿದರು ರಾಮಭಟ್ಟರು. ಅವರ ಮುಗ್ಧತೆ ನೋಡಿ ಸುಬ್ರಮಣಿ, 'ನೋಡಿ ಭಟ್ರೇ, ಈಗ ಅವರು ಎರಡು ಕಿಟಕಿ ಇಡ್ತಾ ಇದಾರೆ. ನೀವೇನಾದ್ರೂ ಜಾಗ ತಗೊಂಡು ದೊಡ್ಡ ಮನೆ ಕಟ್ಟಿಸಬೇಕಾದ್ರೆ, ಇಲ್ಲಾ ಪಿಲ್ಲರ್ ಹಾಕಿ (ಆಧಾರ ಸ್ತಂಭ) ಮೇಲೆ ಕಟ್ಟಿಸ ಬೇಕಾದ್ರೆ, ಆಗ ನೀವು ಅವರ ಕಿಟಕಿಯನ್ನು ಮುಚ್ಚುವ ಹಾಗಿಲ್ಲ. ಆಗ ನೀವು ಮೂರಡಿ (ಅಥವಾ ಒಂದೂವರೆ ಅಡಿ) ಜಾಗ ಬಿಟ್ಟು ಕಟ್ಟಿಸ ಬೇಕಾಗುತ್ತೆ, ಹಾಗಿರುತ್ತೆ ಕಾನೂನು'

'ಅಯ್ಯೋ, ನೀವು ಸರಿ! ಮಗಳು ಅಮೆರಿಕದಲ್ಲಿದ್ದಾಳೆ. ನಮಗೆ ಇದೇ ದೊಡ್ಡಮನೆ. ಹಾಗಿರಬೇಕಾದರೆ ನಾವು ಇನ್ನೆಲ್ಲಿ ಮನೆ ಕಟ್ಟಿಸ್ತೀವಿ ಹೇಳಿ, ನಮ್ಮ ಪರಿಸ್ಥಿತಿನಲ್ಲಿ ಸಾಲ ಸೋಲ ಮಾಡಿ ಕಟ್ಟಿಸೋಕೆ ಸಾಧ್ಯನಾ?'

'ಅಲ್ಲಾ ಭಟ್ರೇ, ಈಗ ನೀವು ಕಟ್ಟಲ್ಲ ಸರಿ. ಮುಂದೆ ನಿಮ್ಮ ಮಗಳು ಅಳಿಯ ಕಟ್ಟೇಕು ಅಂತ ಅಂದುಕೊಳ್ತಾರೆ. ಆಗ ಎಲ್ಲಾ ಕಡೆ ಜಾಗ ಬಿಟ್ಟು ಕಟ್ಟೇಕು. ಮನೆ ಚಿಕ್ಕದಾಗುತ್ತೆ ಈಗ ಅವರು (ನಿಮ್ಮ ಪಕ್ಕದವರು) ಇಡುತ್ತಿರುವ ಕಿಟಕಿ ಮುಚ್ಚಿಸಿದರೆ, ಆಗ ನೀವು ನಿಮ್ಮ ಜಾಗ ಪೂರ್ತಿ ತಗೋಬಹುದು. ಅವರು ಕಾನೂನಿನ ವಿರುದ್ಧವಾಗಿ ಮಾಡ್ತಿದಾರೆ. ನಿಮಗೆ ಕಿಟಕಿ ಮುಚ್ಚಿಸೋದಕ್ಕೆ ಹಕ್ಕಿದೆ. ನೀವೇನಾದ್ರೂ ಅವರೇನಾದ್ರೂ ಮಾಡಿಕೊಳ್ಳಲಿ ಅಂತಾ ಸುಮ್ಮನಿದ್ರೆ, ನಿಮಗೆ ಜಾಗ ಕಡಿಮೆ ಆಗುತ್ತೆ' ಅಂತ ಸುಬ್ರಮಣಿ ಚೂಡಾಮಣಿ ಇಬ್ರೂ ಸೇರಿ ರಾಮಭಟ್ಟರಿಗೆ ಹೇಳಿದರು. ಜೊತೆಗೆ ಅವರ ಬೆಂಬಲಕ್ಕೆ ಅವರಿರುವುದಾಗಿ ಹೇಳಿ ಅವರಿಗೆ ಧೈರ್ಯವೂ ತುಂಬಿದರು.

ಭಟ್ಟರು ಈ ವಿಷಯದಿಂದ ತಬ್ಬಿಬ್ಬಾದ್ರು. ಅವರು ತುಂಬಾ ಯೋಚಿಸಿ, ಅದರ ಸಂಬಂಧವಾಗಿ ಮಗಳು ಅಳಿಯನಿಗೆ ಫೋನ್ ಮಾಡಿ ಕೇಳಿದರು. ಅವರೂ ಕೂಡಾ, 'ಹೌದು ಅವರು ಪೂರ್ತಿ ಜಾಗ ತಗೊಂಡ್ರೆ ನಮ್ಮನೆ ಕಡೆ ಕಿಟಕಿ ಬಾಗಿಲು ಗ್ರಿಲ್ಸ್ ಇಡುವ ಹಾಗಿಲ್ಲ. ಅವರಿಗೆ ಹೇಳಿ ಅದನ್ನು ಮುಚ್ಚಿಸಿ' ಅಂತ ಹೇಳಿದರು. ಇದರಿಂದ ಹೆದರಿ ಕಂಗಾಲಾದ ಭಟ್ಟರು ಪಕ್ಕದ ಮನೆಯ ಗೋವಿಂದಪ್ಪನವರ ಹತ್ತಿರ ಹೋಗಿ ನಯವಾಗಿ 'ನೀವು ಇಟ್ಟಿರೋ ಕಿಟಕಿ ಮುಚ್ಚಿ ಬಿಡಿ. ನೀವು ಹಾಗೆ ಇಡುವ ಹಾಗಿಲ್ಲ' ಎಂದು ಹೇಳಿದರು.

ಅವರ ಮಾತಿಗೆ ಮರ್ಯಾದೆ ಕೊಡದ ಗೋವಿಂದಪ್ಪ ತಮ್ಮ ಪಾಡಿಗೆ ತಾವು ಕೆಲ್ಸ ಮುಂದುವರೆಸಿದರು. ಕಿಟಕಿ ಮುಚ್ಚುವ ಗೋಜಿಗೇ ಹೋಗಲಿಲ್ಲ. ಮುಗ್ಧ ಭಟ್ಟರು ತಾವು ಮುಚ್ಚಿ ಅಂತ ಹೇಳಿರುವುದರಿಂದ ಕಿಟಕಿ ಇಂದಲ್ಲ ನಾಳೆ ಮುಚ್ಚೇ ಮುಚ್ಚುತ್ತಾರೆ ಎಂದು ತಿಳಿದಿದ್ದರು. ಆದರೆ ಮತ್ತೆ ಸುಬ್ರಮಣಿಯವರು ಬಂದು, 'ಅಲ್ಲಾ.. ಭಟ್ರೇ, ನೀವು ಸಮಾಧಾನದಿಂದ ಹೇಳಿದರೆ ಅವರು ಕೇಳ್ತಾರಾ? ಅವರು ಕಿಟಕಿ ಮುಚ್ಚೋದಿಲ್ಲಾ. ಹೋಗಿ ಜಗಳ ಆಡಿ. ಬಿ.ಬಿ.ಎಂ.ಪಿ. ಗೆ ಕಂಪ್ಲೆಂಟ್ ಕೊಡುವುದಾಗಿ ಹೇಳಿ' ಅಂತ ಹೇಳಿದಾಗ ಭಟ್ರು 'ಹಾಗೆಲ್ಲಾ ಅಕ್ಕಪಕ್ಕದವರ ಮೇಲೆ ಕಂಪ್ಲೆಂಟ್ ಕೋಡೋದಕ್ಕೆ ಆಗುತ್ತಾ? ನೋಡೋಣ, ಇನ್ನೂ ಒಂದ್ಸಲ ಹೇಳಿ ನೋಡ್ತೀನಿ' ಎಂದರು.

ಮಾರನೇ ದಿನ ಭಟ್ರು ಸಾವಿತ್ರಮ್ಮ ಇಬ್ರು ಹೋಗಿ ಹೇಳಿದರು. ಗೋವಿಂದಪ್ಪ 'ನಾವು ಕಿಟಕಿ ಮುಚ್ಚೋದಕ್ಕೆ ಸಾಧ್ಯವೇ ಇಲ್ಲ. ನಮ್ಮ ಜಾಗ ನಮ್ಮ ದುಡ್ಡು ನೀವೇನು ಮಾಡ್ಕೋತೀರೋ ಮಾಡಿಕೊಳ್ಳಿ' ಎಂದು ನಿಷ್ಠುರವಾಗಿ ಮಾತನಾಡಿದರು. ಕೋಪಗೊಂಡ ಭಟ್ಟರು ಜಗಳ ಆಡಿದರು. ಆದರೆ ಯಾವ ಪ್ರಯೋಜನವೂ ಆಗಲಿಲ್ಲ.

ಹೀಗೆ ಆರಂಭವಾದ ಜಗಳ ದಿನಕ್ಕೊಂದು ರೀತಿಯಂತೆ ನಡೆಯ ತೊಡಗಿತು. ನಂತರ ವಿಪರೀತಕ್ಕೂ ಹೋಯಿತು. ಗೋವಿಂದಪ್ಪನನ್ನು ನೋಡಿದರೆ ಸಾಕು, ಭಟ್ಟರಿಗೆ ಪಿತ್ತ ನೆತ್ತಿಗೇರಿ ಅವನನ್ನು ಬೈಯುವಂತಾಗಿತ್ತು. ಇದರಿಂದ ಎಂದೂ ಕಾಣದ ರಕ್ತದೊತ್ತಡ ಅವರನ್ನಾವರಿಸಿತು. ಗೋವಿಂದಪ್ಪ ಭಟ್ಟರಿಗೆ ಬೇಜಾರಾಗಲೆಂದೇ ಅವರ ಮನೆಯ ಕಸ ಕಡ್ಡಿ, ಎಂಜಲು ಮುಸುರೆ, ಮೊಟ್ಟೆ ಸಿಪ್ಪೆ ಎಲ್ಲಾ ಭಟ್ಟರ ಅಂಗಳದ ಒಳಗೆ ಹಾಕುತ್ತಿದ್ದರು. ಮಡಿ ಆಚರಿಸುತ್ತಿದ್ದ ಭಟ್ಟರು ಹಾಗೂ ಸಾವಿತ್ರಮ್ಮನಿಗೆ ಕಿರಿಕಿರಿ ಆಗುತ್ತಿತ್ತು. ಈ ಅಸಹ್ಯದಿಂದ ಬೇಸರಗೊಂಡು ಭಟ್ರು ಒಂದು ತೀರ್ಮಾನಕ್ಕೆ ಬಂದು, ಗೋವಿಂದಪ್ಪ ರೀತಿ ನೀತಿ ಬಿಟ್ಟು ಮನೆ ಕಟ್ಟಿಸುತ್ತಿರುವುದಾಗಿ ಕಂಪ್ಲೆಂಟ್ ಕೊಡುವುದಾಗಿ ನಿರ್ಧಾರ ಮಾಡಿ, ಈ ವಿಷಯವನ್ನು ಸುಬ್ರಮಣಿಗೆ ಹೇಳಿದರು. ಆಗ ಸುಬ್ರಮಣಿ, 'ಭಟ್ರೇ, ನೀವು ಈಗ ಕಂಪ್ಲೆಂಟ್ ಕೊಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಈಗ ಅವರು ಕಿಟಕಿ ಇಟ್ಟಾಗಿದೆ. ಈಗ ಕಂಪ್ಲೆಂಟ್ ಕೊಟ್ರೂ ಮೇಲಿನವರು ಬರ್ತಾರೆ.